ಅವರು ಈ ವಿಷಯವನ್ನು ಇಷ್ಟು ಲಘುವಾಗಿ ತೆಗೆದು ಕೊಂಡಿರುವುದಕ್ಕೆ ನಾನು ಖೇದ ವ್ಯಕ್ತ ಮಾಡುತ್ತೇನೆ. ಮುಂದೆ ಅಲ್ಲಿ ಯಾವ ಕಟ್ಟಡವೂ ಆಗಬಾರದು. ಅಲ್ಲಿ ನೆಲಮಟ್ಟದಲ್ಲಿ ಜಲಮಂಡಲಿಯ ಜಲಾಗಾರ ಬಂದಾಗಲೇ ವಿಷಯ ಸಾರ್ವಜನಿಕವಾಗಿ ಚರ್ಚೆಗೆ ಬಂತು. ಇಂತಹ ವಿಷಯವನ್ನು ಮಂತ್ರಿಗಳು ಲಘುವಾಗಿ ಪರಿಗಣಿಸುವುದು ಸರಿಯಲ್ಲ. ಆದ್ದರಿಂದ ಮಂತ್ರಿಗಳು ತಕ್ಷಣ ಅಲ್ಲಿಗೆ ಹೋಗಿ ಕೆಲಸಕ್ಕೆ ತಡೆ ಮಾಡಿ ಮುಂದೆ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಕಾರ್ಯಪ್ರವೃತ್ತರಾಗಬೇಕು. ಆ ಆಶ್ರಮದವರಿಗೆ ಬೇಕಾದರೆ ಬೇರೆ ಕಡೆ ಜಾಗ ಕೊಡಿ. ಮುಂದೆ ಇಂತಹ ಆಶ್ರಮಗಳು ತುಂಬಾ ಬರುತ್ತವೆ. ಇವು ಸ್ಪೂರಿಯಸ್ ಆಶ್ರಮಗಳು, ಈ ರೀತಿ ಬರುವವರು ಪ್ರಭಾವೀ ಅಧಿಕಾರಿಗಳಾಗಿರುತ್ತಾರೆ. ಹಿಂದಿನ ಮುಖ್ಯಕಾರ್ಯದರ್ಶಿಯವರೂ ಇದರಲ್ಲಿ ಇದ್ದರು. 1983 ರಲ್ಲಿ ಇದೇ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪ ಆಗಿದೆ. ಮತ್ತೆ ಈಗಲೂ ಅದೇ ವಿಚಾರ ಪ್ರಸ್ತಾಪವಾಗುತ್ತಿದೆ. ಇವತ್ತು ಅಲ್ಲಿ ಆ ಬಗ್ಗೆ ಅವಕಾಶ ಕೊಡಬಾರದು. ಅವಕಾಶ ಕೊಟ್ಟರೆ ನಾವು ಉಗ್ರ ಹೋರಾಟ ಮಾಡಬೇಕಾಗುತ್ತದೆ. ಶಾಸಕನಾಗಿ ನಾನು ಹೇಳುತ್ತೇನೆ. ನಾವು ಅಲ್ಲಿ ಕೂತರೆ ನೀವು ಬರಬೇಕಾಗುತ್ತದೆ. ಆಗ ನಿಮ್ಮ ಬಂಡವಾಳ ಗೊತ್ತಾಗುತ್ತದೆ. ಇದನ್ನು ಲಘುವಾಗಿ ನೋಡಬೇಡಿ. ಮಾನ್ಯ ಮಂತ್ರಿಗಳು ಖುದ್ದಾಗಿ ನೋಡಿ ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಿಕ್ಕೇಗೌಡರು ಹೇಳಿದ ಹಾಗೆ ಈ ವಿಷಯವನ್ನು ನಾನು ಲಘುವಾಗಿ ನೋಡಿಲ್ಲ. ನಾನು ಇದನ್ನು ಸೀರಿಯಸ್ಸಾಗೇ ನೋಡಿ ಈ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅಧ್ಯಕ್ಷರೇ, ತಮಗೆ ಗೊತ್ತಿರುವಹಾಗೆ 1981 ರಲ್ಲಿ ಅವರಿಗೆ ಮಂಜೂರಾದ ಜಾಗ ಆದಾಗಿದೆ. 1986 ರಲ್ಲಿ ಅಲ್ಲಿನ 62,300 ಅಡಿಯಲ್ಲಿ 40,000 ಅಡಿಯನ್ನು ಕ್ಯಾನ್ಸಲ್ ಮಾಡುವುದಕ್ಕೆ ಸರ್ಕಾರ ಆದೇಶ ನೀಡಿದರೂ ಕೂಡಾ ಅಂದು ರಮಣಮಹರ್ಷಿಯವರ ಕಡೆಯವರು ಹೈಕೋರ್ಟಿಗೆ ಹೋಗಿದ್ದು, ಒಂದು ಸೆಟಲ್‌ಮೆಂಟ್ ಆಗಿದೆ. ಆ ಸೆಟಲ್‌ಮೆಂಟ್ ಏನೇ ಆದರೂ ನಾವು ಪಾಲಿಸಬೇಕಾದ ಒಂದು ಕಾರ್ಯ ನಮ್ಮ ಮೇಲೆ ಇದ್ದೇ ಇದೆ. ಅಧಿಕಾರಿಗಳೂ ಇದರಲ್ಲಿ ಸೇರಿದ್ದಾರೆ. ನಿನ್ನೆಯೇ ಈ ವಿಷಯ ಪ್ರಸ್ತಾಪವಾದ ಮೇಲೆ ಈಗಾಗಲೇ ನಮ್ಮ ಅಧಿಕಾರಿಗಳಿಂದ ವರದಿ ಬಂದಿದೆ. ಅಲ್ಲಿ ಯಾವುದೇ ಅನಧಿಕೃತ ಕಟ್ಟಡಗಳನ್ನು ಕಟ್ಟುತ್ತಿಲ್ಲ. ನಾವೇ ವೈಯಕ್ತಿಕವಾಗಿ ಅಲ್ಲಿಗೆ ಹೋಗಿ ಭೇಟಿ ಮಾಡಿ ಅಲ್ಲಿ ಒಡಂಬಡಿಕೆ ಏನಾಗಿದೆ ಎಂಬುದನ್ನು ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : ಈ ಕಾಗದ ಪತ್ರಗಳನ್ನು ತಮಗೆ ಕಳಿಸುತ್ತೇನೆ.

ಅಧ್ಯಕ್ಷರು : ಕಳಿಸಿಕೊಡಿ.

ವಿಷಯ (2) : ಚಿಕ್ಕಮಗಳೂರು ಜಿಲ್ಲೆಯ ಕಾಫಿ ತೋಟವಿರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಮೂಲಗಳಾದ ಹಳ್ಳ ಮತ್ತು ಬಾವಿಗಳಿಗೆ ಕಾಫಿ ಪಲ್ಪರ್ ನೀರು ಹರಿದು ಕಲುಷಿತಗೊಳ್ಳುತ್ತಿರುವುದು

ಶ್ರೀಮತಿ ಮೋಟಮ್ಮ (ಮೂಡಿಹೆರ್) : ಅಧ್ಯಕ್ಷರೇ,

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕಾಫಿ ತೋಟದ ಪಲ್ಪರ್‌ಗಳಿಂದ ಹೊರ ಬರುತ್ತಿರುವ ಕಲ್ಮಶ ನೀರಿನಿಂದ ಬಾವಿಗಳು ಮತ್ತು ಕೆರೆಗಳು, ಕುಡಿಯುವ ನೀರಿನ ಮೂಲಗಳು ಕಲುಷಿತವಾಗಿ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು): ಮುಖ್ಯಮಂತ್ರಿಗಳ ಪರವಾಗಿ ಕರ್ನಾಟಕ ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯಿದೆ

1984, ದಿನಾಂಕ 21.9.84 ರಿಂದ ಜಾರಿಗೊಳಿಸಲಾಗುತ್ತಿದೆ. ಕಾಫಿ ಪಲ್ಪರ್ ಮತ್ತು ಕಾಫಿ ಹಣ್ಣು ತೊಳೆಯುವ ಘಟಕಗಳಿಂದ ಬರುವ ಕಲುಷಿತ ನೀರನ್ನು ನಿಗಧಿಪಡಿಸಿದ ಗುಣಮಟ್ಟಕ್ಕೆ ಶುದ್ಧೀಕರಿಸಿ ನದಿ, ಹಳ್ಳ, ಝರಿಗಳು, ಅಥವಾ ವ್ಯವಸಾಯಕ್ಕೆ ಉಪಯೋಗಿಸಬೇಕೆಂದು ತಿಳಿಸಲಾಗಿದೆ. ಇದಕ್ಕೆ ಮಂಡಳಿಯ ಅನುಮತಿ ಪತ್ರವನ್ನು ಪಡೆಯಬೇಕು. ಕಾಫಿ ಪಲ್ಪರ್ ಘಟಕಗಳ ಮಾಲೀಕರಿಗೆ ಇದರ ಬಗ್ಗೆ ಸೂಕ್ತ ತಿಳುವಳಿಕೆ ನೀಡಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 900 ಕಾಫಿ ಪಲ್ಪರ್ ಘಟಕಗಳಿವೆ. ಈ ಪಲ್ಪರ್ ಮಾಲೀಕರಿಗೆ ಕಟ್ಟುನಿಟ್ಟಿನ ಎಚ್ಚರಿಗೆ ನೀಡಿ ಕಲುಷಿತ ನೀರನ್ನು ಶುದ್ಧೀಕರಿಸದೆ ಜಲ ಸಂಪನ್ಮೂಲಗಳಿಗೆ ಬಿಡಬಾರದೆಂದು ತಿಳಿಸಿದೆ.

ಪ್ರತಿ ವರ್ಷ ಅಕ್ಟೋಬರ್, ನವೆಂಬರ್, ಮೇಳಿಗೆ ಕಾಫಿ ಪಲ್ಪಿಂಗ್ ಕಾರ್ಯವು ಪ್ರಾರಂಭವಾಗುವುದು. ಪ್ರಾದೇಶಿಕ ಅಧಿಕಾರಿಗಳಿಗೆ ಆದೇಶ ನೀಡಿ ಕಾಫಿ ತೋಟದ ಕಲ್ಮಷಗಳು ಕುಡಿಯುವ ನೀರಿನ ಸಂಪನ್ಮೂಲಗಳಿಗೆ ಸೇರದಂತೆ ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಈ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳಿಂದಾಗಲಿ ಅಥವಾ ಉಪ ವಿಭಾಗಾಧಿಕಾರಿಗಳಿಂದಾಗಲಿ ಕಾಫಿ ತೋಟದ ಮಾಲೀಕರುಗಳ ಸಬೆ ಕರೆದಲ್ಲಿ ಆ ಸಭೆಗೆ ಹಾಜರಾಗಿ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಲು ಕೂಡ ಪ್ರಾದೇಶಾಧಿಕಾರಿಗಳಿಗೆ ತಿಳಿಸಿದೆ.

ಅವಶ್ಯಕತೆ ಕಂಡುಬಂದ ಸ್ಥಳದಲ್ಲಿ ಪ್ರತಿಬಂಧಕಾಜ್ಞೆ ವಿಧಿಸಿ ಕಾನೂನು ಕ್ರಮ ಕೈಗೊಳ್ಳಲೂ ಕೂಡ ತಿಳಿಸಿದೆ.

+ ಶ್ರೀಮತಿ ಮೋಟಮ್ಮ : ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 900 ಕಾಫಿ ಪಲ್ಪರ್ ಘಟಕಗಳು ಇವೆ. ಈ ಪಲ್ಪರ್‌ಗಳ ಮಾಲೀಕರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿ ಕಲುಷಿತ ನೀರನ್ನು ಶುದ್ಧೀಕರಿಸದೆ ಜಲ ಸಂಪನ್ಮೂಲಗಳಿಗೆ ಬಿಡಬಾರದೆಂದು ತಿಳಿಸಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗೇ "ಪ್ರತಿ ವರ್ಷ ಅಕ್ಟೋಬರ್, ನವೆಂಬರ್, ಮೇಳಿಗೆ ಕಾಫಿ ಪಲ್ಪಿಂಗ್ ಕಾರ್ಯವು ಪ್ರಾರಂಭವಾಗುವುದು. ಪ್ರಾದೇಶಿಕ ಅಧಿಕಾರಿಗಳಿಗೆ ಆದೇಶ ನೀಡಿ ಕಾಫಿ ತೋಟದ ಕಲ್ಮಷಗಳು ಕುಡಿಯುವ ನೀರಿನ ಸಂಪನ್ಮೂಲಗಳಿಗೆ ಸೇರದಂತೆ ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಈ ಸಂಬಂದದಲ್ಲಿ ಕಾಫಿ ತೋಟದ ಮಾಲೀಕರುಗಳ ಸಭೆ ಕರೆದಲ್ಲಿ ಆ ಸಭೆಗೆ ಹಾಜರಾಗಿ ಈ ಬಗ್ಗೆ ಸೂಕ್ತ ತಿಳುವಳಿಗೆ ನೀಡಲು ಕೂಡ ಪ್ರದೇಶಾಧಿಕಾರಿಗಳಿಗೆ ತಿಳಿಸಿದೆ" ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ಯಾವ ಕಾರ್ಯ ಕೂಡ ಆಗಿಲ್ಲ. ಕಾಫಿ ಮತ್ತು ಪಲ್ಪರ್‌ಗಳಿಂದ ಬರುವಂತಹ ನೀರನ್ನು ನಿಗದಿಪಡಿಸಿದ ಗುಣಮಟ್ಟಕ್ಕೆ ಶುದ್ಧಿಕರಿಸಿ ನದಿ, ಹಳ್ಳ, ಝರಿಗಳು ಅಥವಾ ವ್ಯವಸಾಯಕ್ಕೆ ಬಳಸಬೇಕೆಂದು ತಿಳಿಸಿದ್ದರೂ ಕೂಡ ಮಾಲೀಕರು ಇದ್ಯಾವುದನ್ನು ಪಾಲನೆ ಮಾಡುತ್ತಿಲ್ಲ. ಇದೆಲ್ಲಾ ಕುಡಿಯುವ ನೀರಿಗೆ ಹರಿದು ಸಾಮಾನ್ಯ ಜನರಿಗೆ ಕರುಳುಬೇನೆ ಉಂಟಾಗಿ ಆಸ್ಪತ್ರೆಯಲ್ಲಿ ಸೇರಿರುವ ದಾಖಲಾತಿಗಳು ಇವೆ. ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್ ಅಂತಹವರಿಗೆ ಇದರ ಬಗ್ಗೆ ನಾವು ತಿಳುವಳಿಕೆ ಕೊಟ್ಟಮೇಲೆ ಸಂಬಂಧಪಟ್ಟ ಕಾಫಿ ತೋಟದ ಮಾಲೀಕರುಗಳಿಗೆ ನೋಟೀಸು ಹೋಗಿದೆ. ಮುಂದೆ ಇಂತಹ ಕಾಫಿ ಪಲ್ಪರ್ ನೀರನ್ನು ಕುಡಿಯುವ ನೀರಿಗೆ, ಹಳ್ಳಕ್ಕೆ ಬಿಡದೆ ಇರುವ ಹಾಗೆ ವಾಟರ್ ಪಲ್ಯೂಷನ್ ಬೋರ್ಡ್ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ? ಮುಂದೆ ಇಂತಹ ಕಾರ್ಯ ಆಗದ ಹಾಗೆ ಎಲ್ಲಾ ಕಾಫಿ ತೋಟದ ಮಾಲೀಕರಿಗೆ ಕಾಫಿ ಪಲ್ಪರ್ ನೀರನ್ನು ಕುಡಿಯುವ ನೀರಿಗೆ ಹರಿಸಿದರೆ ಹಳ್ಳಕ್ಕೆ ಬಿಟ್ಟರೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಯಾರು ಕಾಫಿ ಪಲ್ಪರ್ ಘಟಕ ಇಟ್ಟುಕೊಂಡಿದ್ದಾರೆ ಅವರ ಸಭೆಯನ್ನು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು ಕರೆದು ಆ ಸಭೆಯಲ್ಲಿ ನಿಮ್ಮ ಪ್ರದೇಶದ ಅಧಿಕಾರಿಗಳು ಭಾಗವಹಿಸಲಿಕ್ಕೆ ಹೇಳುತ್ತೇನೆ. ಇದುವರೆಗೆ ಸಭೆ ಆಗದಿದ್ದರೆ, ಈ ಸಬೆಯನ್ನು ಕರೆದು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಅದಕ್ಕೆ ಸಂಬಂಧಪಟ್ಟ ವರದಿಗಳನ್ನು ಕೂಡಲೇ ತರಿಸುತ್ತೇನೆ. ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ. ಅದನ್ನು ಅನುಷ್ಠಾನ ಮಾಡಲಿಕ್ಕೆ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇನೆ.

+ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ಮಂತ್ರಿಗಳು ಹೇಳಿದಹಾಗೆ 900 ಕಾಫಿ ಪಲ್ಪರ್ ಯೂನಿಟ್‌ಗಳಿವೆ. ಮಾನ್ಯಮಂತ್ರಿಗಳು ಉತ್ತರ ' ಹೇಳುವಾಗ ವಾಟರ್ ಪಲೂಷನ್ ಮಂಡಳಿವತಿಯಿಂದ ಪರವಾನಗಿ ತೆಗೆದುಕೊಂಡು, ಪರವಾನಗಿ ಅಥವಾ ಅನುಮತಿ ಯನ್ನು ಪಡೆದನಂತರವೇ ಪಲ್ಪರ್‌ಗಳನ್ನು ನಡೆಸಬೇಕು ನಾವು ಆ ಆದೇಶವನ್ನು ನೀಡಿದ್ದೇವೆಂದು ಮಾನ್ಯಮಂತ್ರಿಗಳು ಹೇಳಿದ್ದಾರೆ. ಆದರೆ ನಾನು ಒಬ್ಬ ಕಾಫಿ ಬೆಳೆಗಾರನಾಗಿ ನಾನು ನೋಡುವುದೇನೆಂದರೆ ನಮಗೆ ಆಶ್ಚರ್ಯವಾಗುತ್ತದೆ. ನನ್ನ ತಾಲ್ಲೂಕು ಇರಬಹುದು ಅಥವಾ ನನ್ನ ಜಿಲ್ಲೆಯಿರಬಹುದು ಅಲ್ಲಿ ವಾಟರ್ ಪಲುಷನ್ ಬೋರ್ಡ್ ಇದೆಯಾ? ಅವರು ಕುಡಿಯುವ ನೀರಿನ ಪರಿಸ್ಥಿತಿಯನ್ನು ಅದು ಒಳ್ಳೆಯ ರೀತಿಯಲ್ಲಿದೆಯೇ ಎಂದು ನೋಡಿಕೊಳ್ಳುವ ಸೌಜನ್ಯತೆ ಅವರಿಗೆ ಇದೆಯೇ ಎನ್ನುವ ಅನುಮಾನ ನನಗೆ ಬಂದಿದೆ. ಇವತ್ತು ಸರ್ಕಾರದ ಗಮನ ಸೆಳೆಯುವ ವಿಚಾರ ಏನೆಂದರೆ ನಮ್ಮ ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ಹಿರೇಕೊಳಲುಕೆರೆಯ ನೀರನ್ನು ನಾವು ಕುಡಿಯುವ ನೀರಾಗಿ ಉಪಯೋಗಿಸುತ್ತಿದ್ದೇವೆ. ಆ ಕುಡಿಯುವ ನೀರಿನ ವ್ಯವಸ್ಥೆ ಯಾವ ರೀತಿಯಲ್ಲಿದೆ, ಅಂದರೆ ಬರುವಂತಹ ನೀರಿನಲ್ಲಿ ಕಾಫಿಪಲ್ಪರ್ ನೀರು ಮಿಶ್ರಿತವಾಗಿರುತ್ತದೆ. ಕಾಫಿಸಿಪ್ಪೆ ಸಹ ಆ ನೀರಿನಲ್ಲಿರುತ್ತದೆ. ಸಂಗ್ರಹಿಸಲ್ಪಟ್ಟ ಕುಡಿಯುವ ನೀರಿನ ಹೀರೇಕೊಳಲುಕೆರೆ ನೀರಿನ ಬಣ್ಣವನ್ನು ತಾವು ಪರಿಶೀಲನೆ ಮಾಡುವುದಾದರೆ, ಅದಕ್ಕೆ ತಾವು ಯಾವುದೇ ಅಧಿಕಾರಿಯನ್ನು ನೇಮಿಸಿ. ಅದಕ್ಕೆ ನಮಗೆ ಸಂತೋಷವಿದೆ. ಆ ಕುಡಿಯುವ ನಿರಿನ ಬಣ್ಣ ಕೆಂಪಾಗಿದೆ. ಅದನ್ನು ಪಟ್ಟಣಗಳಲ್ಲಿರುವಂತಹ ಮೆಷಿನರಿಗಳಿಂದ ಪಿರ್ಟರ್ ಮಾಡಿದರೂ ಆ ಬಣ್ಣವನ್ನು ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ನೀರಿನ ದುರ್ವಾಸನೆಯನ್ನು ನೋಡಿ ಜನರು ಭಯಪಡುತ್ತಾರೆ. ಆ ನೀರನ್ನು ಕುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯಮಾಡುವುದೇನೆಂದರೆ, ಅನೇಕ ವರ್ಷಗಳಿಂದ ನಮ್ಮ ಜನರು ಹಿರೇಕೊಳಲುಕೆರೆ ನೀರನ್ನು ಕುಡಿಯಲಿಕ್ಕೆ ಉಪಯೋಗಿಸುತ್ತಿದ್ದಾರೆ. ಈ ವಿಚಾರದ ಮೇಲೆ ಎಷ್ಟು ಜನರು ಮೇಲೆ ವಾಟರ್‌ಪಲೂಷನ್ ಬೋರ್ಡ್‌ನವರು ಕೇಸುಗಳನ್ನು ವಗೈರೆ ಹಾಕಿದ್ದಾರೆ? ಕಾಫಿಬೆಳೆಗಾರರಿಗೆ ನೋಟೀಸ್ ಕೊಟ್ಟಿದ್ದಾರೆ? ಇದರ ಬಗ್ಗೆ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಂದ ಉತ್ತರ ನಿರೀಕ್ಷಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಕಾಫಿ ಪಲ್ಪರ್ ಘಟಕಗಳಿಂದ ಹಿರೇಕೊಳಲುಕರೆ ಕುಡಿಯುವ ನೀರು ಮಾಲಿನ್ಯಗೊಳ್ಳುತ್ತಿದೆಯೆಂದು ಆ ಘಟಕಗಳ ಮಾಲೀಕರುಗಳಿಗೆ ನೋಡೀಸು ಕಳುಹಿಸಲಾಗಿದೆ. ತಾವು ಮತ್ತು ಶಾಸಕಿಯರಾದ ಶ್ರೀಮತಿ ಮೋಟಮ್ಮನವರು ಪ್ರಸ್ತಾಪ ಮಾಡಿದ್ದು ಅದು ಪರಿಣಾಮಕಾರಿಯಾಗಿ ಆಗಲಿಲ್ಲವೆಂದು. ಇವತ್ತು ತಮ್ಮ ಪ್ರಶ್ನೆ ಈ ರೀತಿ ಕೇಳಿ ಬಂದಿರುವುದರಿಂದ ಅದನ್ನು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ತಿಳಿಸಿ, ನಿಮ್ಮ ಪ್ರದೇಶದಲ್ಲಿರತಕ್ಕ ಉನ್ನತ ಮಟ್ಟದ ಜಿಲ್ಲಾ ಮಾಲಿನ್ಯ ನಿವಾರಣಾ ಅಧಿಕಾರಿಯವರಿಗೂ ಕಳುಹಿಸಿ ಜಿಲ್ಲಾಮಟ್ಟದಲ್ಲಿ ತೆಗೆದುಕೊಂಡತಹ ನಿರ್ಣಯಗಳನ್ನು ಅನುಷ್ಠಾನ ಮಾಡಲಿಕ್ಕೆ

ಉಪವಿಭಾಗಾಧಿಕಾರಿಗಳ ಮಟ್ಟದಲ್ಲಿ ಒಂದು ತಿಂಗಳೊಳಗೆ ಸಭೆಯನ್ನು ಕರೆದು ಅದರ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಸೂಕ್ತವಾದಂತಹ ವ್ಯವಹಾರ ಮಾಡುತ್ತೇನೆಂದು ಮಾನ್ಯ ಸದ್ಯಸ್ಯರುಗಳಾದ ಸಗೀರ್‌ಅಹ್ಮದ್ ಮತ್ತು ಮೋಟಮ್ಮನವರಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಪ್ರಕಟಣೆ.

ಅಧ್ಯಕ್ಷರು : ದಿನಾಂಕ 20 ನೇ ಮಾರ್ಚಿ 1991 ರಂದು ನಡೆದ ವಿಧಾನಸಬೆಯು ಪ್ರಸ್ತುತ ಅಧಿವೇಶನವನ್ನು 27ನೇ ಮಾರ್ಚಿ 1991 ರವರೆಗೆ ಮುಂದುವರಿಸಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

21ನೇ ಮಾರ್ಚಿ 1991

ಅ) 1991-92 ನೇ ಸಾಲಿನಲ್ಲಿ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ಮುಂದುವರಿಸುವುದು.

ಆ) 1990-91ನೇ ಸಾಲಿನ ಅನುಪೂರಕ ಬೇಡಿಕೆ (2ನೇ ಕಂತು) ಬಗ್ಗೆ ಚರ್ಚೆ ಮುಂದುವರಿಸುವುದು.

22ನೇ ಮಾರ್ಚಿ 1991

ಅ) 1991ನೇ ಸಾಲಿನ ಆಯವ್ಯಯದ ಮೇಲೆ ಹಾಗೂ 1990-91ನೇ ಸಾಲಿನ ಅನುಪೂರಕ ಬೇಡಿಕೆ (2ನೇ ಕಂತು) ಬಗ್ಗೆ ಚರ್ಚೆಗೆ ಮುಖ್ಯ ಮಂತ್ರಿಯವರ ಉತ್ತರ.

ಆ) 1991-92ನೇ ಸಾಲಿನ ಅನುದಾನ ಬೇಡಿಕೆಗಳು (ಲೇಖಾನುದಾನ) ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಇ) 1990-91 ನೇ ಸಾಲಿನ ಅನುಪೂರಕ ಅನುದಾನ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಅವುಗಳನ್ನು ಮತಕ್ಕೆ ಹಾಕುವುದು.

ಈ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ 1991 ಅಂಗೀಕರಿಸುವುದು.

ಉ) ಕರ್ನಾಟಕ ಧನ ವಿನಿಯೋಗ ವಿಧೇಯಕ 1991 ಅಂಗೀಕರಿಸುವುದು.

ಊ) ತೆರಿಗೆ ವಿಧೇಯಕಗಳು.

23ನೇ	ಮಾರ್ಚಿ	1991	ಅಧಿವೇಶನವಿರುವುದಿಲ್ಲ
24ನೇ	ಮಾರ್ಚಿ	1991	ರಜಾ ದಿನ
25ನೇ	ಮಾರ್ಚಿ	1991	
26ನೇ	ಮಾರ್ಚಿ	1991	
27ನೇ	ಮಾರ್ಚಿ	1991	ಶಾಸನ ರಚನೆ ಹಾಗೂ ಶಾಸನಬದ್ಧ ನಿರ್ಣಯಗಳು

ಈಗ ಸಭೆಯು ಮುಂದುವರಿದು ಮತ್ತೆ 3 ಗಂಟೆಗೆ ಸೇರುವುದು. (ಸದನವು 1 ಗಂಟೆ 45 ನಿಮಿಷಗಳಿಗೆ ಮುಕ್ತಾಯವಾಗಿ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 3.15 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)